ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
**ಕರ್ನಾಟಕ ರಾಜ್ಯ ಕಟ್ಟಡ ಮತ್ತು**
**ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**

**ಕರ್ನಾಟಕ ಸರ್ಕಾರ**
**ಕಾರ್ಮಿಕ ಇಲಾಖೆ**

**ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ,**
**ಬನ್ನೇರುಘಟ್ಟ ರಸ್ತೆ, ಬೆಂಗಳೂರು- 560029.**
**ಕಛೇರಿ:080-29753354, 29653354**
**kbocwwb@karnataka.gov.in**

**ಸಂಖ್ಯೆ:** KBOCWWB/SEVA-SINDHU/CR-05/2020-21 Date:03/08/2023.

## ಸಾರ್ವಜನಿಕರ ಗಮನಕ್ಕೆ

ವಿಷಯ: ಪೈಲೆಟ್ ಮೋಡ್‌ಗಾಗಿ ಆಯ್ಕೆ ಮಾಡಲಾದ ಬೆಂಗಳೂರು ನಗರ ಮತ್ತು ಬಾಗಲಕೋಟೆ ಜಿಲ್ಲೆಗಳ ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಯೋಜನಾ ಸೌಲಭ್ಯಗಳ ಪ್ರಕ್ರಿಯೆಯನ್ನು ದಿನಾಂಕ:02/08/2023 ರಿಂದ ಸೇವಾಸಿಂಧು ತಂತ್ರಾಂಶದಿಂದ Auto Re-Direct ಮೂಲಕ ಮಂಡಳಿಯ ನೂತನ ತಂತ್ರಾಂಶಕ್ಕೆ ಅರ್ಜಿಗಳು ಸ್ವೀಕೃತವಾಗುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಕಾಇ: 383 ಎಲ್‌ಇಟಿ 2020, ಬೆಂಗಳೂರು ದಿನಾಂಕ:12.01.2021.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಯೋಜನಾ ಸೌಲಭ್ಯಗಳ ಅರ್ಜಿಗಳನ್ನು ಸೇವಾಸಿಂಧು ತಂತ್ರಾಂಶದ ಮೂಲಕ ಸ್ವೀಕರಿಸಲಾಗುತ್ತಿದ್ದು, ಸದರಿ ಅರ್ಜಿಗಳನ್ನು ಕಾರ್ಮಿಕ ನಿರೀಕ್ಷಕರು/ ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಮಿಕ ಆಯುಕ್ತರುಗಳು ಸೇವಾ ಸಿಂಧು ತಂತ್ರಾಂಶದ ಮೂಲಕ ಅನುಮೋದನೆ ನೀಡುತ್ತಿರುತ್ತಾರೆ, ಉಲ್ಲೇಖದ ಆದೇಶದನ್ವಯ ಮಂಡಳಿಗೆ ನೂತನ ತಂತ್ರಾಂಶವನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿರುತ್ತದೆ.

ಮಂಡಳಿಯ ನೂತನ ತಂತ್ರಾಂಶವನ್ನು ದಿನಾಂಕ:02/08/2023 ರಿಂದಲೇ ಅನ್ವಯವಾಗುವಂತೆ ಬೆಂಗಳೂರು ನಗರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಪೈಲೆಟ್ ಮೋಡ್ ಮೂಲಕ ಚಾಲನೆ ಮಾಡಲಾಗುತ್ತಿದ್ದು, ಸೇವಾ ಸಿಂಧು ತಂತ್ರಾಂಶದ ಮೂಲಕ ಬೆಂಗಳೂರು ನಗರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಯೋಜನಾ ಸೌಲಭ್ಯಗಳಿಗಾಗಿ ಸ್ವೀಕೃತವಾಗುವ ಅರ್ಜಿಗಳನ್ನು Auto Re-Direct ಮೂಲಕ ನೇರವಾಗಿ ಮಂಡಳಿಯ ನೂತನ ತಂತ್ರಾಂಶಕ್ಕೆ ಲಿಂಕ್ ಮಾಡಲಾಗಿರುತ್ತದೆ. ಆದ್ದರಿಂದ, ಸದರಿ ಜಿಲ್ಲೆಗಳ ಸಾರ್ವಜನಿಕರಿಗೆ ಮಂಡಳಿಯ ನೂತನ ತಂತ್ರಾಂಶಕ್ಕೆ ಸಂಬಂಧಿಸಿದಂತೆ, ಯಾವುದೇ ತಾಂತ್ರಿಕ ತೊಂದರೆಗಳು ಉದ್ಭವಿಸಿದಲ್ಲಿ, ಕಾರ್ಮಿಕ ಇಲಾಖೆಯ ಈ ಕೆಳಕಂಡ ಹೆಲ್ಪ್-ಲೈನ್‌ಗೆ ಸಂಪರ್ಕಿಸುವಂತೆ ಹಾಗೂ ನೂತನ ತಂತ್ರಾಂಶದ ಕೈಪಿಡಿಯನ್ನು ಮಂಡಳಿಯ ವೆಬ್ ಸೈಟ್‌ನಲ್ಲಿ (**https://karbwwb.karnataka.gov.in**) ಅಳವಡಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ನೀಡಲಾಗಿದೆ.

ಮಂಡಳಿಯ ನೂತನ ತಂತ್ರಾಂಶದ URL: **https://kbocwwb.karnataka.gov.in**
ಕಾರ್ಮಿಕ ಇಲಾಖೆಯ ಹೆಲ್ಪ್-ಲೈನ್ ಸಂಖ್ಯೆ: 155214 (ಬೆಳಗ್ಗೆ: 06 ರಿಂದ ರಾತ್ರಿ 10ರ ವರೆಗೆ)
ಕಾರ್ಮಿಕ ಇಲಾಖೆಯ ವಾಟ್ಸ್‌ಆಪ್ ಸಂಖ್ಯೆ: 9845353214 (ಬೆಳಗ್ಗೆ: 06 ರಿಂದ ರಾತ್ರಿ 10ರ ವರೆಗೆ)

**(ಭಾರತಿ ಡಿ, ಭಾ.ಆ.ಸೇ)**
**ಕಾರ್ಯದರ್ಶಿಗಳು**
**ಕ.ಕ ಮತ್ತು ಇ.ನಿ.ಕಾ.ಕ ಮಂಡಳಿ**